ಎಕ್ಸಿಕ್ಯೂಶನ್ ನಂಬರ 2/2022

ಪಿ. ಡಬ್ಲ್ಯೂ-1.

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16 -11-2022.

**ಮುಖ್ಯ ವಿಚಾರಣೆಃ ಶ್ರೀ ಬಿ.ಎಫ್.ಪಿ. ಡಿಕ್ರಿ ಹೋಲ್ಡರ್ ಪರ ವಕೀಲರಿಂದಃ**

ನಾನು ಈ ದಾವೆಯಲ್ಲಿ ಡಿಕ್ರಿ ಹೋಲ್ಡರ್ ಅಂತಾ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರಪಡಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತದೆ ಮತ್ತು ಸದ್ರಿ ವಿಷಯವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪ್ರತಿಜ್ಞಾ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಎರಡು ಗಣಕೀಕೃತ ಪಹಣಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಪಿ 1 ಅಂತ, ದೃಢೀಕೃತ ನಕಲಿನ ಅಸಲು ದಾವಾ ಸಂಖ್ಯೆ.5-2010 ರ ಅಂತಿಮ ತೀರ್ಪನ್ನು ಹಾಜರಪಡಿಸಿದ್ದು ಅದನ್ನು ನಿಪಿ 2 ಅಂತ, ದೃಢೀಕೃತ ನಕಲಿನ ಆರ್.ಎ. ಅಂತಿಮ ತೀರ್ಪನ್ನು ಹಾಜರಪಡಿಸಿದ್ದು ಅದನ್ನು ನಿಪಿ 3 ಅಂತ, ಪೋಲಿಸರಿಗೆ ಒಂದು ಫಿರ್ಯಾದನ್ನು ಕೊಟ್ಟಿದ್ದು ಅವರು ಒಂದು ಹಿಂಬರಹ ಕೊಟ್ಟಿರುತ್ತಾರೆ. ಸದ್ರಿ ಹಿಂಬರಹವನ್ನು ಹಾಜರಪಡಿಸಿದ್ದು ಅದನ್ನು ನಿಪಿ 4 ಅಂತ ಗುರುತಿಸಲಾಯಿತು.

ಮುಂದಿನ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**ಸಿವಿಲ್ ಜಡ್ಜ, ಮುಂಡಗೋಡ.**